ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಸ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 462

ಉತ್ತರಿಸಬೇಕಾದ ದಿನಾಂಕ : 22-07-2019

ಉತ್ತರಿಸುವ ಸಚಿವರು : ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ದೇಸಿ ಗೋವುಗಳ ರಕ್ಷಣೆ ಮತ್ತು ಅವುಗಳ ತಳಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮಗಳಾವುವು:	1. ರಾಜ್ಯದಲ್ಲಿ ಜಾನುವಾರು ತಳಿ ಸಂವರ್ಧನೆಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ದನ ಮತ್ತು ಎಮ್ಮೆ ತಳಿ ಸಂವರ್ಧನ ನೀತಿ 2015 ಅನ್ನು ರೂಪಿಸಲಾಗಿದ್ದು, ಅದರಂತೆ, ದೇಸಿ ತಳಿಯ ಜಾನುವಾರುಗಳ ಸಂವರ್ಧನೆಯನ್ನು ಕೃತಕಗರ್ಭಧಾರಣೆ ಕಾರ್ಯಕ್ರಮದ ಮೂಲಕ ಕೈಗೊಳ್ಳಲಾಗುತ್ತಿದೆ. 2. ರಾಜ್ಯದ ದೇಸಿ ತಳಿಗಳ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಅಮೃತ್‌ಮಹಲ್ ತಳಿಗಾಗಿ ಅಜ್ಜಂಪುರದಲ್ಲಿ, ಹಳ್ಳಿಕಾರ್ ತಳಿ ತುಮಕೂರು ಜಿಲ್ಲೆಯ ಕುಣಿಕೇನಹಳ್ಳಿಯಲ್ಲಿ, ಕೃಷ್ಣವ್ಯಾಲಿ ತಳಿ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನಲ್ಲಿ ಮತ್ತು ಖಿಲ್ಲಾರ್ ತಳಿ ಅಭಿವೃದ್ಧಿಗಾಗಿ ಹಾವೇರಿ ಜಿಲ್ಲೆಯ ಬಂಕಾಪುರದಲ್ಲಿ ಪ್ರತ್ಯೇಕ ತಳಿ ಸಂವರ್ಧನಾ ಕೇಂದ್ರಗಳನ್ನು ಸ್ಥಾಪಿಸಿ ನಿರ್ವಹಿಸಲಾಗುತ್ತಿದೆ. 3. ದೇಸಿ ತಳಿಗಳ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಪ್ರತ್ಯೇಕ ದೇಸಿ ತಳಿ ಘನೀಕೃತ ವೀರ್ಯನಳಿಕೆ ಉತ್ಪಾದನಾ ಕೇಂದ್ರವನ್ನು ಮುನಿರಾಬಾದ್, ಕೊಪ್ಪಳ ಜಿಲ್ಲೆ ಇಲ್ಲಿ ಸ್ಥಾಪಿಸಲಾಗುತ್ತಿದೆ. 4. ರಾಜ್ಯದ ದೇಸಿ ತಳಿಗಳಲ್ಲಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು, ಇವುಗಳ ಕ್ಷೇತ್ರ ಉತ್ಪಾದನಾ ಸಾಮರ್ಥ್ಯವನ್ನು ಮಾಪನಮಾಡಿ ದಾಖಲಿಸಲಾಗುತ್ತಿದೆ. 5. ಹವಾಮಾನ ವೈಪರೀತ್ಯ ಸಂಬಂಧ ದೇಸಿ ತಳಿ ರಾಸುಗಳು/ಕುರಿ/ಮೇಕೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಕಾರ್ಯಕ್ರಮ (NAFCC) ದ ಅಡಿಯಲ್ಲಿ ಕೇಂದ್ರ ಸರ್ಕಾರದ ಅನುದಾನದೊಂದಿಗೆ, ರಾಜ್ಯದ ದೇಶಿ ಜಾನುವಾರುಗಳಾದ ಮಲೆನಾಡು ಗಿಡ್ಡ/ ಅಮೃತ್ ಮಹಲ್/ ಹಳ್ಳಿಕಾರ್ ತಳಿಯ ಹಸುಗಳನ್ನು ಸಂರಕ್ಷಿಸಿ, ಆಯ್ದ ತಳಿ ಸಂವರ್ಧನೆಯನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ.
ಆ	ಜಾನುವಾರುಗಳ ಅಕ್ರಮ ಸಾಗಾಟ ಮತ್ತು ಅನಧಿಕೃತ ಕಸಾಯಿ ಖಾನೆಗಳಲ್ಲಿ ಗೋವುಗಳನ್ನು ಮಾಂಸಕ್ಕಾಗಿ ಹತ್ಯೆ ಮಾಡುತ್ತಿರುವುದರಿಂದ ರಾಜ್ಯದಲ್ಲಿ ಗೋವುಗಳ ಪ್ರಮಾಣ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	Karnataka Prevention of Cow Slaughter and Cattle Preservation Act and Rules 2001 ರನ್ವಯ ರಾಜ್ಯದಲ್ಲಿ ಅಕ್ರಮ ಜಾನುವಾರು ಸಾಗಾಣಿಕೆ ಮತ್ತು ಅನಧಿಕೃತ ಹತ್ಯೆ ನಿರ್ಬಂಧಿಸಿದ್ದು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಎಸ್.ಪಿ.ಸಿ.ಎ ಸಮಿತಿಯನ್ನು ರಚಿಸಿದ್ದು, ವಿವಿಧ ಇಲಾಖೆಗಳ ಸಮನ್ವಯತೆಯೊಂದಿಗೆ ಉಸ್ತುವಾರಿ ನಡೆಸಲಾಗುತ್ತಿದ್ದು, ಗೋವುಗಳ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ.
ಇ	ಅಕ್ರಮವಾಗಿ ಗೋವುಗಳ ಸಾಗಾಟದ ಮತ್ತು ಹತ್ಯೆಯನ್ನು ನಿಲ್ಲಿಸಲು ಗೋವುಗಳ ಸಂರಕ್ಷಣಾ ಕಾನೂನನ್ನು ರಚಿಸುವ ಬಗ್ಗೆ ಸರ್ಕಾರದ ನಿಲುವೇನು; ಗೋವುಗಳ ಸಂರಕ್ಷಣಾ ಕಾನೂನನ್ನು ಯಾವ ಕಾಲಮಿತಿಯೊಳಗೆ ರಚಿಸಲಾಗುವುದು ಮತ್ತು ಯಾವಾಗ ಜಾರಿಗೆ ತರಲಾಗುವುದು?	ಅಕ್ರಮವಾಗಿ ಗೋವುಗಳ ಸಾಗಾಟದ ಮತ್ತು ಹತ್ಯೆಯನ್ನು ನಿಲ್ಲಿಸಲು Karnataka Prevention of Cow Slaughter and Cattle Preservation Act and Rules 2001 ರಚಿಸಿದ್ದು, ಈಗಾಗಲೇ ಜಾರಿಯಲ್ಲಿರುತ್ತದೆ.

ಪಸಂಮೀ 23 ಸಲೆವಿ 2019

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು